MARCH 07, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ರಾಜ್ಯ ಮುಂಗಡಪತ್ರ; ಹುಬ್ಬಳ್ಳಿ, ಧಾರವಾಡದಲ್ಲಿ,** ಕೌಶಲ ತರಬೇತಿ ಅಕಾದೆಮಿ ಸ್ಥಾಪನೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಒಲವು.

**ಕಲ್ಯಾಣ ಕರ್ನಾಟಕದ, ಬೀದರ, ರಾಯಚೂರು,** ಕೊಪ್ಪಳ ಸೇರಿದಂತೆ, 7 ಜಿಲ್ಲೆಗಳಲ್ಲಿ, ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯಗಳ, ಉನ್ನತೀಕರಣಕ್ಕೆ, ಬಜೆಟ್ ಪ್ರಾವಧಾನ.

**ಯು.ಪಿ.ಎಸ್.ಸಿ. 2025ನೇ ಸಾಲಿನ,** ಫಲಿತಾಂಶ ಪ್ರಕಟ; ಬೆಳಗಾವಿ ಜಿಲ್ಲೆ, ಚಿಕ್ಕೋಡಿಯ, ಕಿರಣ ಸಣ್ಣಪ್ಪ ಕಮತೆ, ರಾಜ್ಯಕ್ಕೆ ಪ್ರಥಮ ಸ್ಥಾನ.

**'ಜನೌಷಧಿ ಅಗ್ಗ ಮತ್ತು ವಿಶ್ವಾಸಾರ್ಹ;** ಉಳಿತಾಯದ ಜೊತೆ, ಆರೋಗ್ಯ ಲಾಭ' ಧ್ಯೇಯದೊಂದಿಗೆ, ಇಂದು 8ನೇ ಜನೌಷಧಿ ವಾರ್ಷಿಕೋತ್ಸವ.

<><><>

**ಈಗ ವಾರ್ತೆಗಳ ವಿವರ**

<><><>

**ಹುಬ್ಬಳ್ಳಿ, ಧಾರವಾಡಕ್ಕೆ,** 200 ಕೋಟಿ ರೂಪಾಯಿ ವೆಚ್ಚದಲ್ಲಿ, ಕೌಶಲ ತರಬೇತಿ ಅಕಾದೆಮಿ ಸ್ಥಾಪನೆಗೆ, ಹಣಕಾಸು ಸಚಿವರೂ ಆದ, ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಸಕ್ತ ಸಾಲಿನ ಮುಂಗಡಪತ್ರದಲ್ಲಿ, ಪ್ರಾವಧಾನ ಕಲ್ಪಿಸಿದ್ದಾರೆ. ದಾಖಲೆಯ 17ನೇ ಬಾರಿಗೆ, ರಾಜ್ಯದ ಬಜೆಟ್ ಮಂಡಿಸಿದ ಅವರು, ಪಶು ರೋಗಗಳನ್ನು ನಿಖರವಾಗಿ ಪತ್ತೆ ಹಚ್ಚಿ, ರಾಸುಗಳ ಆರೋಗ್ಯ ಕಾಪಾಡಲು, ಹೈನೋದ್ಯಮದ ಬಲವರ್ಧನೆಯ ದೃಷ್ಟಿಯಿಂದ, ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯ ಅಧೀನದ, ಪಶು ವೈದ್ಯಕೀಯ ಆಸ್ಪತ್ರೆಗಳಲ್ಲಿ, ಜಾನುವಾರುಗಳ ಸಿ.ಟಿ. ಸ್ಕ್ಯಾನಿಂಗ್ ಕೇಂದ್ರಗಳನ್ನು ಸ್ಥಾಪಿಸಲು, ಅನುದಾನ ಘೋಷಿಸಿದ್ದಾರೆ.

<><><>

**ಪ್ರಸಕ್ತ 2026–27ನೇ ಸಾಲಿನ,** ಆರ್ಥಿಕ ವರ್ಷದ ಬಜೆಟ್‌ನಲ್ಲಿ, ಶಿಕ್ಷಣ ಕ್ಷೇತ್ರದ ಬಲವರ್ಧನೆಗೆ, ಗಣನೀಯ ಪ್ರಮಾಣದಲ್ಲಿ ಅನುದಾನ ಒದಗಿಸಿದ್ದಾಗಿ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಯು.ಜಿ.ಸಿ. ಮಾಳವೀಯ ಮಿಷನ್ ಟೀಚರ್ ಟ್ರೇನಿಂಗ್

ಸೆಂಟರ್ ಅಧ್ಯಕ್ಷ ಹಾಗೂ ಹಿರಿಯ ಅರ್ಥಶಾಸ್ತ್ರಜ್ಞ, ಪ್ರೊಫೆಸರ್ ಬಿ.ಎಚ್. ನಾಗೂರ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಪ್ರೊ. ಬಿ.ಎಚ್. ನಾಗೂರ ಧ್ವನಿ – 80 ಸೆಕೆಂದುಗಳು**

<><><>

**ಕಲ್ಯಾಣ ಕರ್ನಾಟಕದ, ಬೀದರ, ರಾಯಚೂರು,** ಕೊಪ್ಪಳ ಸೇರಿದಂತೆ, ವಿಜಯಪುರ, ಬಾಗಲಕೋಟೆ, ಚಿತ್ರದುರ್ಗ, ಮಂಡ್ಯ, ಭದ್ರಾವತಿ, ಕೆ.ಜಿ.ಎಫ್ ಹಾಗೂ ಚಿಕ್ಕಮಗಳೂರಿನ, ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯಗಳನ್ನು ಉನ್ನತೀಕರಿಸಲು, ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಂಗಡಪತ್ರದಲ್ಲಿ ಅನುದಾನ ಒದಗಿಸಿದ್ದಾರೆ. ಕಾರ್ಮಿಕ ರಾಜ್ಯ ವಿಮಾ ಸೊಸಾಯಿಟಿ ಸಾರಥ್ಯದಲ್ಲಿ, ಕಿತ್ತೂರು ಕರ್ನಾಟಕ ಭಾಗದ, ಹುಬ್ಬಳ್ಳಿ ಹಾಗೂ ಮೈಸೂರು ಮತ್ತು ದೊಡ್ಡಬಳ್ಳಾಪುರದಲ್ಲಿ, ಅರೆ ವೈದ್ಯಕೀಯ ಕೋರ್ಸ್ ಹಾಗೂ ಇಂದಿರಾನಗರದಲ್ಲಿ, ಮೂರು ವ ರ್ಗಳ ಸ್ನಾತಕೋತ್ತರ ಡಿ.ಎನ್.ಬಿ ಕೋರ್ಸ್ ಪ್ರಾರಂಭಿಸಲು, ಪ್ರಾವಧಾನ ಕಲ್ಪಿಸಿದ್ದಾರೆ. ಕಾಯಕ ಭಾಗ್ಯ ಯೋಜನೆ ಮೂಲಕ, ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರಿಗೆ, ಕೌಶಲಾಧಾರಿತ ಉದ್ಯೋಗ ಒದಗಿಸಲು, ಆನ್ಲೈನ್ ಉದ್ಯೋಗ ವಿನಿಮಯ ಕೇಂದ್ರ ಸ್ಥಾಪನೆಗೆ, ಹಣಕಾಸು ಖಾತೆ ಸಚಿವ ಸಿದ್ದರಾಮಯ್ಯ, ಐದು ಕೋಟಿ ರೂಪಾಯಿ ಅನುದಾನ, ಮೀಸಲಿರಿಸಿದ್ದಾರೆ. ಪ್ರಸಕ್ತ ರಾಜ್ಯ ಬಜೆಟ್, ಜನ ಕಲ್ಯಾಣ ಹಾಗೂ ಅಭಿವೃದ್ಧಿಯ ಸಮತೋಲಿತ, ದೂರದೃಷ್ಟಿಯ ಮುಂಗಡಪತ್ರ ಎಂದು, ಧಾರವಾಡದ ಕಿಟ್ಟೆಲ್ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ, ಪ್ರೊಫೆಸರ್ ಕ್ರಿಸ್ಟೋಫರ್ ಮನೋಹರ, ಆಕಾಶವಾಣಿ ಮೂಲಕ, ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

<><><>

**ಪ್ರೊ. ಕ್ರಿಸ್ಟೋಫರ್ ಮನೋಹರ ಧ್ವನಿ – 68 ಸೆಕೆಂದುಗಳು**

<><><>

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಕೇಂದ್ರ ಲೋಕಸೇವಾ ಆಯೋಗ,** 2025ನೇ ಸಾಲಿನ, ನಾಗರಿಕ ಸೇವೆಗಳ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದ್ದು, ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲೂಕು, ಹತ್ತರವಾಟ ಗ್ರಾಮದ, 29 ವರ್ಷದ, ಕಿರಣ ಸಣ್ಣಪ್ಪ ಕಮತೆ, ರಾಜ್ಯಕ್ಕೆ ಮೊದಲ ಹಾಗೂ ದೇಶಕ್ಕೆ 53ನೇ ರ್‍ಯಾಂಕ್ ಪಡೆದಿದ್ದಾರೆ. ಬೆಳಗಾವಿಯ ಗೋಗಟೆ ಇಂಜಿನಿಯರಿಂಗ್ ಕಾಲೇಜಿನಲ್ಲಿ, ಸಿವಿಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಪದವಿ ಪಡೆದಿದ್ದು, ಸದ್ಯ ಬೆಂಗಳೂರಿನ ಲೋಕೋಪಯೋಗಿ ಇಲಾಖೆ ಮುಖ್ಯ ಕಚೇರಿಯಲ್ಲಿ, ಸಹಾಯಕ ಇಂಜಿನಿಯರ್ ಆಗಿ, ಸೇವೆ ಸಲ್ಲಿಸುತ್ತಿದ್ದಾರೆ. ಹುಬ್ಬಳ್ಳಿಯ ಕೃಪಾ ಅಭಯ ಜೈನ್ 190ನೇ ರ್‍ಯಾಂಕ್ ಗಳಿಸಿದ್ದಾರೆ. ತಮ್ಮ ಸತತ ಐದನೇ ಪ್ರಯತ್ನದಲ್ಲಿ ಅವರು ಈ ಸಾಧನೆ ಗೈಯ್ದಿದ್ದಾರೆ. 2023 ರಲ್ಲಿ 440ನೇ ರ್‍ಯಾಂಕ್ ಪಡೆದಿದ್ದ ಕೃಪಾ, ಐಎಫ್ಎಸ್ ಕೇಡರ್‌ಗೆ ಆಯ್ಕೆಯಾಗಿ, ಡೆಹೆರಾಡೂನ್‌ನಲ್ಲಿ ಸದ್ಯ ತರಬೇತಿ

ಪಡೆಯುತ್ತಿದ್ದಾರೆ. ಯಾದಗಿರಿ ಜಿಲ್ಲೆಯ, ಸಂದೀಪ ಬಾಡದ, ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಹಾಗೂ ಅಖಿಲ ಭಾರತ ಮಟ್ಟದಲ್ಲಿ 82ನೇ ರ್‍ಯಾಂಕ್, ವೈದ್ಯೆ ನಿವೇದಿತಾ ಭಾವಿಮನಿ 469ನೇ ರ್‍ಯಾಂಕ್, ಬಸವರಾಜ ಜವಳಿ 664ನೇ ಹಾಗೂ ಚಂದ್ರಶೇಖರ 880ನೇ ರ್‍ಯಾಂಕ್ ಪಡೆದಿದ್ದಾರೆ. ರಾಜ್ಯದ ಒಟ್ಟು 22 ಜನ ಪ್ರತಿಭಾವಂತರು, ಯು.ಪಿ.ಎಸ್.ಇ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಗಮನ ಸೆಳೆದಿದ್ದಾರೆ. ಅಖಿಲ ಭಾರತ ಮಟ್ಟದಲ್ಲಿ, ಅನುಜ್ ಅಗ್ನಿಹೋತ್ರಿ ಪ್ರಥಮ ಸ್ಥಾನ, ರಾಜೇಶ್ವರಿ ಸುವೆ ದ್ವಿತೀಯ ಹಾಗೂ ಆಕಾಶ ಧುಲ್, ತೃತೀಯ ರ್‍ಯಾಂಕ್ ಗಳಿಸಿದ್ದಾರೆ.

<><><>

**'ಜನೌಷಧಿ ಅಗ್ಗ ಮತ್ತು ವಿಶ್ವಾಸಾರ್ಹ;** ಉಳಿತಾಯದ ಜೊತೆ, ಆರೋಗ್ಯ ಲಾಭ' ಎಂಬ ಧ್ಯೇಯದೊಂದಿಗೆ, ಇಂದು 8ನೇ ಜನೌಷಧಿ ವಾರ್ಷಿಕೋತ್ಸವ ಆಚರಿಸಲಾಗುತ್ತಿದೆ. ಬಡ ಹಾಗೂ ಮಧ್ಯಮ ವರ್ಗದ ಜನರಿಗೆ, ಅಗ್ಗದ ದರದಲ್ಲಿ, ಗುಣಮಟ್ಟದ ಔಷಧಿಗಳನ್ನು ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ ಅಡಿಯಲ್ಲಿ, ಪ್ರಧಾನಮಂತ್ರಿ ಭಾರತೀಯ ಜನೌಷಧಿ ಕೇಂದ್ರಗಳ ಮೂಲಕ, ದೇಶಾದ್ಯಂತ ಒದಗಿಸುತ್ತಿದೆ. ಕಳೆದ 5ನೇ ತಾರೀಖಿನ ವರೆಗೆ, ಜನೌಷಧಿ ಸಪ್ತಾಹ ಆಚರಿಸುವ ಮೂಲಕ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯದಂತೆ, ರಾಜ್ಯದ ಹಲವೆಡೆ, ಆರೋಗ್ಯ ಸಂಬಂಧಿ ಉಚಿತ ತಪಾಸಣಾ ಶಿಬಿರಗಳಲ್ಲಿ, ಶ್ರೀಸಾಮಾನ್ಯರ ಆರೋಗ್ಯ ಪರೀಕ್ಷೆ ಕೈಗೊಳ್ಳಲಾಗಿದೆ. ಬೀದರನಲ್ಲಿ, ಜನೌಷಧಿ ಸಪ್ತಾಹದ ಹಿನ್ನೆಲೆ ಜರುಗಿದ, ಆರೋಗ್ಯ ತಪಾಸಣಾ ಶಿಬಿರದಲ್ಲಿ, ಆರೋಗ್ಯಾಕಾಂಕ್ಷಿಗಳು ಪಾಲ್ಗೊಂಡಿದ್ದರು ಎಂದು, ವೈದ್ಯಾಧಿಕಾರಿ ಸಚಿನ ತಿಳಿಸಿದ್ದಾರೆ.

<><><>

**ಬುದ್ಧ, ಬಸವ, ಅಂಬೇಡ್ಕರ್** ಹಾಗೂ ಮಹಾತ್ಮ ಗಾಂಧೀಜಿ ಅವರ, ಸಾಮಾಜಿಕ ನ್ಯಾಯದ ಪರಿಕಲ್ಪನೆ, ಸಮಾನತೆಯ, ಸಮ ಸಮಾಜದ ನಿರ್ಮಾಣದ ಆಶಯವನ್ನು, ಭೀಮ ಗಾಯನ ಕಾರ್ಯಕ್ರಮ, ಪ್ರತಿಬಿಂಬಿಸುತ್ತದೆ ಎಂದು, ಶಿವಮೊಗ್ಗ ಜಿಲ್ಲೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ, ಸಿ.ಎಸ್ ಚಂದ್ರಭೂಪಾಲ ಹೇಳಿದ್ದಾರೆ. ಶಿವಮೊಗ್ಗದ ಬಿ.ಆರ್. ಅಂಬೇಡ್ಕರ ಭವನದಲ್ಲಿ, 'ಭೀಮ ಗಾಯನ' ಕಾರ್ಯಕ್ರಮ, ಉದ್ಘಾಟಿಸಿ, ಮಾತನಾಡಿದರು. ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪ್ರತಿಭಾವಂತ ದಲಿತ ಕಲಾವಿದರ ಮೂಲಕ, ಬಿ.ಆರ್. ಅಂಬೇಡ್ಕರ ಅವರು ಭೇಟಿ ನೀಡಿದ, ರಾಜ್ಯದ ಆಯ್ದ 20 ಕಡೆಗಳಲ್ಲಿ, ಭೀಮ ಗಾಯನ ಕಾರ್ಯಕ್ರಮ ಆಯೋಜಿಸಿದೆ.

<><><>

**ಕಲಬುರಗಿ ಜಿಲ್ಲಾ ಮಟ್ಟದ** ಸಿರಿ ಧಾನ್ಯ ಮೇಳ–2026 ಹಾಗೂ ಬೆಳೆ ವಿಮೆ ಪರಿಹಾರ ಬಿಡುಗಡೆ ಕಾರ್ಯಕ್ರಮ, ಇಂದು ನಗರದ ಡಾಕ್ಟರ ಎಸ್.ಎಂ. ಪಂಡಿತ ರಂಗಮಂದಿರದಲ್ಲಿ ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ರಾಜ್ಯಸಭೆಯ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಅವರ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ, ಸಿರಿ ಧಾನ್ಯ ಮೇಳ–2026 ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ.

<><><>

**ಕಲಬುರಗಿಯ ಚಂದ್ರಶೇಖರ ಪಾಟೀಲ** ಕ್ರೀಡಾಂಗಣದಲ್ಲಿ ನಾಳೆ ಸಮಾರೋಪಗೊಳ್ಳಲಿರುವ, ಅಂತಾರಾಷ್ಟ್ರೀಯ ಟೆನಿಸ್ ಫೆಡರೇಶನ್ ಮಹಿಳೆಯರ ಟೆನಿಸ್ ಪಂದ್ಯಾವಳಿ – ಐ.ಟಿ.ಎಫ್. ಡಬ್ಲ್ಯು 35, ಸಿಂಗಲ್ಸ್ ವಿಭಾಗದಲ್ಲಿ, ಭಾರತದ ವೈಷ್ಣವಿ ಆಡ್ಕರ ಹಾಗೂ ಅಂಕಿತಾ ರೈನಾ ಸೆಮಿ ಫೈನಲ್ ಪ್ರವೇಶಿಸಿದ್ದಾರೆ. ಡಬಲ್ಸ್ ವಿಭಾಗದ, ಸೆಮಿಫೈನಲ್ ಪಂದ್ಯದಲ್ಲಿ, ಅಂಕಿತಾ–ವೈಷ್ಣವಿ ಜೋಡಿ, ಸ್ವದೇಶದ ಸೋನಲ್ ಪಾಟೀಲ–ಬೇಲಾ ತಮಾಂಕರ್ ಜೋಡಿಯನ್ನು, ನೇರ 7–6, 6–2 ಸೆಟ್‌ಗಳಲ್ಲಿ ಪರಾಭವಗೊಳಿಸಿ, ಫೈನಲ್ ಪ್ರವೇಶಿಸಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ರಾಜ್ಯ ಮುಂಗಡಪತ್ರ; ಹುಬ್ಬಳ್ಳಿ, ಧಾರವಾಡದಲ್ಲಿ,** ಕೌಶಲ ತರಬೇತಿ ಅಕಾದೆಮಿ ಸ್ಥಾಪನೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಒಲವು.

**ಕಲ್ಯಾಣ ಕರ್ನಾಟಕದ, ಬೀದರ, ರಾಯಚೂರು,** ಕೊಪ್ಪಳ ಸೇರಿದಂತೆ, 7 ಜಿಲ್ಲೆಗಳಲ್ಲಿ, ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯಗಳ, ಉನ್ನತೀಕರಣಕ್ಕೆ, ಬಜೆಟ್ ಪ್ರಾವಧಾನ.

**ಯು.ಪಿ.ಎಸ್.ಸಿ. 2025ನೇ ಸಾಲಿನ,** ಫಲಿತಾಂಶ ಪ್ರಕಟ; ಬೆಳಗಾವಿ ಜಿಲ್ಲೆ, ಚಿಕ್ಕೋಡಿಯ, ಕಿರಣ ಸಣ್ಣಪ್ಪ ಕಮತೆ, ರಾಜ್ಯಕ್ಕೆ ಪ್ರಥಮ ಸ್ಥಾನ.

**'ಜನೌಷಧಿ ಅಗ್ಗ ಮತ್ತು ವಿಶ್ವಾಸಾರ್ಹ;** ಉಳಿತಾಯದ ಜೊತೆ, ಆರೋಗ್ಯ ಲಾಭ' ಧ್ಯೇಯದೊಂದಿಗೆ, ಇಂದು 8ನೇ ಜನೌಷಧಿ ವಾರ್ಷಿಕೋತ್ಸವ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>